ನಮಗೆ ಅನೇಕ ಸಲ ಇದರ ಕೊರತೆ ಕೆಲವು ಆಸ್ಪತ್ರೆಗಳಲ್ಲಿ ಕಂಡುಬಂದಿದ್ದರಿಂದ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ತರಿಸಿಕೊಂಡು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಇದನ್ನು ದಾಸ್ತಾನು ಇಡುವ ಹಾಗೆ ನಾನು ಈಗಾಗಲೇ ಇದಕ್ಕೆ ಬೇಕಾದ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು.—೩೪೧ (೯೭) ಶ್ರೀ ಬಾಕಿಲ ಹುಕ್ಕಪ್ಪ—ಸದಸ್ಯರು ಹಾಜರಿಲ್ಲ.

೩೪೨ (೧೧೯) ಶ್ರೀ ಎಸ್.ಎಸ್. ಕಡಪಟ್ಟಿ—ಸದಸ್ಯರು ಹಾಜರಿಲ್ಲ.

ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

ಸುಳ್ಯ ಸರಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯರ ಸಂಖ್ಯೆ

೩೪೧ (೯೭) ಶ್ರೀ ಬಾಕಿಲ ಹುಕ್ಕಪ್ಪ (ಸುಳ್ಯ).—ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ:—

ಸುಳ್ಯ ಕ್ಷೇತ್ರದಲ್ಲಿರುವ ಸರಕಾರಿ ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರರು ಇದ್ದಾರೆಯೆ; ಹಾಗಾದ್ದಲ್ಲಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಕೊಡಲು ಔಷಧಿ ಇಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ? ಸುಳ್ಯ ಆರೋಗ್ಯ ಕೇಂದ್ರ ಹೆಡ್‌ಕ್ವಾರ್ಟರ್ಸ್ ಆಗದಿರಲು ಕಾರಣಗಳೇನು ಮತ್ತು ಯಾವಾಗ ಮಾಡಲಾಗುವುದು ?

ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸದಸ್ಯರುಗಳ ನೇಮಕ

೩೪೨ (೧೧೯) ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

ಅ) ಕರ್ನಾಟಕ ಲೋಕಸೇವಾ ಆಯೋಗಕ್ಕೆ ೧೯೭೨ರಿಂದಾ ಈವರೆಗೆ ನೇಮಕ ಮಾಡಿದ ಸದಸ್ಯರ ಸಂಖ್ಯೆ ಎಷ್ಟು ;

ಆ) ಈಗ ಇರುವ ಸದಸ್ಯರ ಸಂಖ್ಯೆ ಎಷ್ಟು ಇದರಲ್ಲಿ ೧೯೭೨ರಿಂದಾ ಹೈದರಾಬಾದ್ ಕರ್ನಾಟಕ ಹಾಗೂ ಮುಂಬಯಿ ಕರ್ನಾಟಕದಿಂದ ಯಾವ ಇಸ್ವಿಯಲ್ಲಿ ಎಷ್ಟು ಜನರಿದ್ದರು ಮತ್ತು ಈಗ ಆ ಭಾಗದಿಂದ ಎಷ್ಟು ಸದಸ್ಯರಿದ್ದಾರೆ ;

ಇ) ಹೈದರಾಬಾದ್ ಕರ್ನಾಟಕ ಬಳ್ಳಾರಿ ಸಹಿತ ಹಾಗೂ ಮುಂಬಯಿ ಕರ್ನಾಟಕ ಅವುಗಳಿಗೆ ಪ್ರಾತಿನಿಧ್ಯ ಕಡಿಮೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ ಪ್ರಾದೇಶಿಕ ಅಸಮಾನತೆ ನೀಗಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಚಿಕ್ಕೋಡಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು

೩೪೬ (೧೩೬) ಶ್ರೀ ಎ.ಎ. ನಿಂಬಾಲ್ಕರ್ (ಸಾದಲಗ) (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:—

(ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ಅಪೂರ್ಣಗೊಂಡಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ;

(ಆ) ೧೦-೧-೧೯೮೩ ಹಾಗೂ ೧೧-೭-೧೯೮೩ರ ನಡುವಿನ ಕಾಲಾವಧಿಯಲ್ಲಿ ಚಿಕ್ಕೋಡಿ ತಾಲ್ಲೂಕಿನಲ್ಲಿ ಯಾವುದೇ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರ್ಮಾಡಲಾಗಿದೆಯೆ ;

(ಇ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹಾವು ಕಡಿತದ ನಿರೋಧ ಔಷಧಿ ಗಳನ್ನೊಂದಿವೆಯೆ ?